# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1369 |
| ಸದಸ್ಯರ ಹೆಸರು | ಶ್ರೀಮತಿ ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 19-03-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯಲ್ಲಿ ಈ ಹಿಂದೆ ಘೋಷಣೆಯಾಗಿದ್ದ ನೂತನ ತಾಲ್ಲೂಕುಗಳ ಸಂಖ್ಯೆ ಎಷ್ಟು; ಅವು ಯಾವುವು; | 2017-18ನೇ ಸಾಲಿನಿಂದ ಇದುವರೆಗೆ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 04 ನೂತನ ತಾಲ್ಲೂಕುಗಳನ್ನು ಸೃಜಿಸಲಾಗಿದ್ದು, ವಿವರ ಈ ಕೆಳಕಂಡಂತಿವೆ.<br>1. ಗುಳೇದಗುಡ್ಡ<br>2. ರಬಕವಿ-ಬನಹಟ್ಟಿ<br>3. ತೇರದಾಳ<br>4. ಇಳಕಲ್ |
| ಆ) | ಜಿಲ್ಲೆಯ ನೂತನ ತಾಲ್ಲೂಕುಗಳಲ್ಲಿ ರಬಕವಿ-ಬನಹಟ್ಟಿ ತಾಲ್ಲೂಕು ಹಾಗೂ ತೇರದಾಳ ತಾಲ್ಲೂಕು ಕೂಡಿದೆಯೇ; ನೂತನ ತಾಲ್ಲೂಕುಗಳಿಗೆ ಯಾವ ಯಾವ ರೀತಿಯ ಸೌಲಭ್ಯವನ್ನು ಸರ್ಕಾರ ನೀಡುತ್ತದೆ; ಸೌಲಭ್ಯಗಳ ಪಟ್ಟಿ ನೀಡುವುದು; ಹಾಗೂ ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ; | ಬಾಗಲಕೋಟೆ ಜಿಲ್ಲೆಯಲ್ಲಿ ರಬಕವಿ-ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕು ಹೊಸ ತಾಲ್ಲೂಕುಗಳಾಗಿ ಸೃಜಿಸಲಾಗಿದೆ. 2017-18ನೇ ಸಾಲಿನಿಂದ ಇದುವರೆಗೂ ರಬಕವಿ-ಬನಹಟ್ಟಿ ತಾಲ್ಲೂಕಿಗೆ 49.50 ಲಕ್ಷಗಳನ್ನು ಮತ್ತು ತೇರದಾಳ ತಾಲ್ಲೂಕಿಗೆ 8.00 ಲಕ್ಷಗಳನ್ನು ತಾಲ್ಲೂಕಿನ ಕಾರ್ಯಾರಂಭ ಮತ್ತು ಆಡಳಿತಾತ್ಮಕ ಪ್ರಕಿಯೆ ಪ್ರಾರಂಭಿಸಲು ಹಾಗೂ ಇತರೆ ಖರ್ಚು ವೆಚ್ಚಗಳನ್ನು ಭರಿಸಲು ಕಂದಾಯ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೇ ಪ್ರತೀ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಆಧರಿಸಿ ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಹಂತ-ಹಂತವಾಗಿ ಕಲ್ಪಿಸಲಾಗುವುದು.<br><br>ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ಪ್ರಜಾ ಸೌಧ, ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡಗಳನ್ನು 1735 ಚ.ಮೀ., ವಿಸ್ತೀರ್ಣದಲ್ಲಿ ರೂ. 8.60 ಕೋಟಿಗಳ ಅಂದಾಜು ಮೊತ್ತದಲ್ಲಿ Type-A ಮಾದರಿಯಲ್ಲಿ ನಿರ್ಮಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ.<br><br>ರಬಕವಿ-ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕುಗಳಲ್ಲಿ ತಾಲ್ಲೂಕು ಪ್ರಜಾಸೌಧ ಕಟ್ಟಡ ನಿರ್ಮಿಸಲು ಜಮೀನು ಗುರುತಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದ್ದು, ಸದರಿಯವರಿಂದ ಪ್ರಸ್ತಾವನೆ ಸ್ವೀಕೃತಗೊಂಡ ನಂತರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು. |
| ಇ) | ಈ ರೀತಿಯ ಸೌಲಭ್ಯಗಳನ್ನು ಸದರಿ ತಾಲ್ಲೂಕುಗಳಲ್ಲಿ ನೀಡಲಾಗುತ್ತಿದೆಯೇ; ಎರಡು ತಾಲ್ಲೂಕಿನ ಪ್ರತ್ಯೇಕ ವಿವರ ನೀಡುವುದು; | |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ)</td><td>ಇಲಾಖಾ ಕಛೇರಿಗಳು ಇಲ್ಲದೆ, ಅನ್ಯ ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಕ್ಕೆ ಜನ ಅವಲಂಬಿತ ರಾಗಿರುವುದು ಹಾಗೂ ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಸದರಿ ನೂತನ ತಾಲ್ಲೂಕುಗಳಿಗೆ ಜನಸಂಖ್ಯೆ ಮತ್ತು ಗ್ರಾಮಗಳ ಸಂಖ್ಯೆಗಳ ಆಧಾರದ ಮೇಲೆ ತಹಸೀಲ್ದಾರ್ ಸೇರಿದಂತೆ ಅಗತ್ಯ ಸಂಖ್ಯೆಯ ಸಿಬ್ಬಂದಿಗಳನ್ನು ಮಂಜೂರು ಮಾಡಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲಾಗಿದೆ.<br><br>ಪ್ರಸ್ತುತ ಸದರಿ ತಾಲ್ಲೂಕುಗಳಲ್ಲಿ ಈ ಕೆಳಕಂಡ ತಾಲ್ಲೂಕು ಮಟ್ಟದ ಕಛೇರಿಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ:-
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳ ವಿವರ</th></tr>
<tr><td>1</td><td>ರಬಕವಿ-ಬನಹಟ್ಟಿ</td><td>1. ತಹಸೀಲ್ದಾರ್ ಕಚೇರಿ<br>2. ತಾಲ್ಲೂಕು ಪಂಚಾಯತಿ<br>3. ಪಶು ಸಂಗೋಪನೆ ಆಸ್ಪತ್ರೆ<br>4. ಉಪಖಜಾನೆ<br>5. ನಗರ ಭೂಮಾಪನ ಕಛೇರಿ<br>6. ಅಗ್ನಿ ಶಾಮಕ ದಳ<br>7. ಸಮುದಾಯ ಆರೋಗ್ಯಾಧಿಕಾರಿಗಳ ಕಛೇರಿ<br>8. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಹೆಸ್ಕಾಂ<br>9. ನಗರಾಭಿವೃದ್ಧಿ ಪ್ರಾಧಿಕಾರ<br>10. ನಗರಸಭೆ<br>11. ಪುರಸಭೆ<br>12. ಪೊಲೀಸ್ ಇಲಾಖೆ</td></tr>
<tr><td>2</td><td>ತೇರದಾಳ</td><td>1. ತಹಸೀಲ್ದಾರ್ ಕಚೇರಿ<br>2. ಉಪನೋಂದಣಾಧಿಕಾರಿಗಳ ಕಛೇರಿ<br>3. ಪುರಸಭೆ<br>4. ರೈತ ಸಂಪರ್ಕ ಕೇಂದ್ರ<br>5. ನಾಡ ಕಛೇರಿ ತೇರದಾಳ<br>6. ಪಶು ಆಸ್ಪತ್ರೆ<br>7. ಪ್ರಾಥಮಿಕ ಆರೋಗ್ಯ ಕೇಂದ್ರ<br>8. ಆರಕ್ಷಕ ಉಪನಿರೀಕ್ಷಕ ಠಾಣೆ</td></tr>
</table>
ಮೇಲ್ಕಂಡ ನೂತನ ತಾಲ್ಲೂಕುಗಳಿಗೆ ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹುದ್ದೆಗಳನ್ನು ಸೃಜಿಸಿ ಹಂತ-ಹಂತವಾಗಿ ಕಚೇರಿಗಳನ್ನು ಪ್ರಾರಂಭಿಸಲು ಎಲ್ಲಾ ಇಲಾಖೆಗಳ ಅಪರ ಮುಖ್ಯ / ಪ್ರಧಾನ ಕಾರ್ಯದರ್ಶಿಗಳಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮೂಲಕ ಸೂಕ್ತ ನಿರ್ದೇಶನ ನೀಡಲಾಗಿದೆ.</td></tr>
<tr><td>ಉ)</td><td>ಬಂದಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ?</td></tr>
</table>

**ಸಂಖ್ಯೆ: ಕಂಇ 16 ಎಲ್‌ಆರ್‌ಡಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು